ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1677/2024

| | | | |
|---|---|---|---|
| ಹೆಸರು | : | ಯೋಗಾನಂದ್ ಬಿ ಆರ್ | ಸಿ .ಡಬ್ಲ್ಯೂ :7 |
| ತಂದೆ ಹೆಸರು | : | ರಮೇಶ್ | ಪಿ .ಡಬ್ಲ್ಯೂ :8 |
| ವಯಸ್ಸು | : | 36 ವರ್ಷ | |
| ಉದ್ಯೋಗ | : | ದ್ವಿತೀಯ ದರ್ಜೆ ಸಹಾಯಕರು , ತಾಲ್ಲೂಕು ಕಚೇರಿ , ಗುಬ್ಬಿ | |
| ವಾಸಸ್ಥಳ | : | ತುಮಕೂರು | |

ಸಾಕ್ಷಿಯನ್ನು ದಿಃ 28-05-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಮೇ -2023 ರಿಂದ ಇಂದಿನವರೆಗೂ ದ್ವಿತೀಯ ದರ್ಜೆ ಸಹಾಯಕನಾಗಿ , ತಾಲ್ಲೂಕು ಕಚೇರಿ , ಗುಬ್ಬಿ ಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ನಿಪಿ -2 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -2 (ಡಿ) ಎಂದು ಗುರುತಿಸಲಾಯಿತು.

ದಿಃ 06-07-2024 ರಂದು ಗುಬ್ಬಿಯ ತಾಲ್ಲೂಕು ಕಚೇರಿ ಆವರಣದಲ್ಲಿರುವ ಕಂದಾಯ ಶಾಖೆಯ ಕೊಠಡಿಯಲ್ಲಿರುವ ದ್ವಿತೀಯ ದರ್ಜೆ ಸಹಾಯಕರಾದ ಚಾಸಾ -3 ಮತ್ತು 4 ರವರ ಕ್ಯಾಬಿನ್ ನ ಮುಂಭಾಗದಲ್ಲಿ ನಿಪಿ -2 ಕ್ಕೆ ಸಹಿ ಮಾಡಿದ್ದೇನೆ . ಆರೋಪಿತರು ಅದೇ ಸ್ಥಳದಲ್ಲಿ ಎರಡು ಪ್ರಿಂಟರ್ ಗಳನ್ನು ಕಳ್ಳತನ ಮಾಡಿ ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿದ್ದರು.ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ಗುರುತಿಸಿದ್ದಾರೆ . ಆ ದಿನ ಮಧ್ಯಾಹ್ನ 2.30 ರಿಂದ 3.00 ಗಂಟೆಯವರೆಗೆ ಚಾಸಾ-1 ಮತ್ತು 8 ರವರ ಸಮಕ್ಷಮ ಪಂಚನಾಮೆ ಮಾಡಲಾಗಿದೆ .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ನಾನು ಹೇಳಿದ ದಿನಾಂಕದಂದು ತಾಲ್ಲೂಕು ಕಚೇರಿಯಲ್ಲಿ ಯಾವುದೇ ಮಹಜರು ಮಾಡಿಲ್ಲ , ಠಾಣಯಲ್ಲಿಯೇ ಅದನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಠಾಣೆಯಲ್ಲಿಯೇ ನಿಪಿ -2 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಪೊಲೀಸ್ ಅಧಿಕಾರಿಗಳು ಸೇರಿ ಪ್ರಕರಣಕ್ಕಾಗಿ ಠಾಣೆಯಲ್ಲಿಯೇ ಕುಳಿತು ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ .

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.